

ಮಿಸ್ಸಿಸ್ಸಿಪ್ಪಿ ನದಿ ದಡದಾಚೆ ಮುಂಜಾವಿನಲ್ಲಿ ಕಂಡ ಗೇಟ್ ವೇ ಆರ್ಚ್. ಚಿತ್ರಕೃಪೆ: ಪಾರ್ಕರ್ ಬೊಟ



ಮ್ಯೂಸಿಯಂನಲ್ಲಿ ಕಂಡ, ಆಪ್ತರೊಡನೆ ಸಮಾಲೋಚನೆಯಲ್ಲಿ ತೊಡಗಿದ್ದ ಅಬ್ರಹಾಂ ಲಿಂಕನ್ ಚಿತ್ರ



ಮಿಸ್ಸೋರಿ ಮತ್ತು ಮಿಸ್ಸಿಸ್ಸಿಪ್ಪಿ ಸಂಗಮದಲ್ಲಿ ಲೇಖಕರು.

ದಿಣ್ಣೆಗಳು' (ಕಹೋಕಿಯ ಮೌಂಡ್ಸ್) ಸಿಗುತ್ತವೆ. ಕ್ರಿ.ಶ. 8ನೇ ಶತಮಾನದ ಆದಿಯಿಂದ ಸುಮಾರು ನಾಲ್ಕು ಶತಮಾನಗಳ ಕಾಲ ಇಲ್ಲಿ ಅಸ್ತಿತ್ವದಲ್ಲಿದ್ದ ಒಂದು ಬಗೆಯ 'ರೆಡ್ ಇಂಡಿಯನ್' ನಾಗರಿಕತೆ, ಮೆಕ್ಸಿಕೊ ದೇಶದ ಉತ್ತರಕ್ಕಿರುವ ಅಮೆರಿಕದಲ್ಲಿನ ಅಂತಹ ಸ್ಥಳೀಯ ನಾಗರಿಕತೆಗಳಲ್ಲೇ ಅತ್ಯಂತ ದೊಡ್ಡದಾಗಿತ್ತು.

ಕಹೋಕಿಯ ದಿಣ್ಣೆಗಳ ಮೇಲೆ ಹಾಗೂ ಸಮೀಪದಲ್ಲಿ 'ಕಹೋಕಿಯಾ ನಾಗರಿಕತೆ'ಯ ಕುರುಹುಗಳು ಕಂಡುಬರುತ್ತವೆ. ಅವುಗಳನ್ನು ಅಮೆರಿಕ ಸರ್ಕಾರ ಎಚ್ಚರಿಕೆಯಿಂದ ಕಾಪಾಡಿಕೊಂಡು ಬಂದಿದೆ. ಆ ಪೈಕಿ ಒಂದು ದಿಣ್ಣೆಯನ್ನು ನೂರಾರು ಮೆಟ್ಟಿಲುಗಳ ಮೂಲಕ ಏರಿ ಸುತ್ತಲಿನ ದೃಶ್ಯವನ್ನು ವೀಕ್ಷಿಸುವುದೇ ಒಂದು ಬಗೆಯ ಸೊಗಸು.

ಆ ನಾಗರಿಕತೆಯ ಸಾಮಾಜಿಕ ಸ್ತರಗಳು ಹಾಗೂ ಜನಜೀವನದ ಬಗ್ಗೆ ಸರ್ಕಾರ ನಿಯೋಜಿಸಿದ ಗೈಡ್‌ಗಳು ಗೊತ್ತಿರುವುದನ್ನು ಪ್ರಾಮಾಣಿಕವಾಗಿ ವಿವರಿಸುತ್ತಾರೆ. ಹತ್ತಿರದಲ್ಲಿ ಒಂದು ವಸ್ತುಸಂಗ್ರಹಾಲಯವೂ ಇದೆ. ಒಂದು ಕಾಲದಲ್ಲಿ 'ಇಂಡಿಯನ್ನರಿಂದ' ಸಕಲವನ್ನು ಕಸಿದುಕೊಂಡಿದ್ದರೂ, ಸ್ಥಳೀಯ (ಅಂದರೆ ಯೂರೋಪಿಯನ್ನರು ಅಮೆರಿಕಕ್ಕೆ ಆಗಮಿಸುವ ಮೊದಲಿನ) ನಾಗರಿಕತೆಯ ಶ್ರೀಮಂತಿಕೆಯನ್ನು ಸಾರುವ ಇಂತಹ ಸ್ಥಳಗಳಿಗೆ ಅಮೆರಿಕ ಸರ್ಕಾರ ಇಂದು ನೀಡುತ್ತಿರುವ ಉತ್ತೇಜನ ಶ್ಲಾಘನೀಯ.

## ಚಾರಿತ್ರಿಕ ಮಹತ್ವದ 'ವೈಟ್ ಹೆವನ್'

ಅಮೆರಿಕದ ಚರಿತ್ರೆಯ ದೃಷ್ಟಿಯಿಂದ ಮಹತ್ವವಾದ ಮತ್ತೊಂದು ವಸ್ತುಸಂಗ್ರಹಾಲಯ ಸೇಂಟ್ ಲೂಯಿಸ್‌ನಲ್ಲಿದೆ. ಅದೇ 'ಯೂಲಿಸಿಸ್ ಎಸ್ ಗ್ರಾಂಟ್ ರಾಷ್ಟ್ರೀಯ ಚಾರಿತ್ರಿಕ ಸ್ಥಳ' ಅಥವಾ 'ವೈಟ್ ಹೆವನ್'.

19ನೇ ಶತಮಾನದ ಉತ್ತರಾರ್ಧದವರೆಗೂ ಅಮೆರಿಕದಲ್ಲಿ ಅಸ್ತಿತ್ವದಲ್ಲಿದ್ದ, ಅದರಲ್ಲೂ ಕೃಷಿಯೇ ಪ್ರಮುಖವಾಗಿದ್ದ ದಕ್ಷಿಣದ ರಾಜ್ಯಗಳಲ್ಲಿ ವ್ಯಾಪಕವಾಗಿ ಅಸ್ತಿತ್ವದಲ್ಲಿದ್ದ ಗುಲಾಮಗಿರಿಯನ್ನು (ಸ್ಲೇವರಿ) ರದ್ದುಮಾಡುವ ವಿಷಯದಲ್ಲಿ ಉತ್ತರ ಹಾಗೂ ದಕ್ಷಿಣದ ರಾಜ್ಯಗಳ ನಡುವೆ 19ನೇ ಶತಮಾನದಲ್ಲಿ ತೀವ್ರವಾದ ತಿಕ್ಕಾಟವುಂಟಾಯಿತು. ಮುಂದೆ ಇದು ಅಮೆರಿಕದ ಅಂತರ್ಯುದ್ಧಕ್ಕೆ (ಸಿವಿಲ್ ವಾರ್) ಹಾಗೂ ಕ್ರಿ.ಶ. 1861ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಿಂದ ದಕ್ಷಿಣ ರಾಜ್ಯಗಳ ಬೇರ್ಪಡೆಗೆ ಎಡೆಮಾಡಿಕೊಟ್ಟಿತು. ಆ ಪರ್ವಕಾಲದಲ್ಲಿ ಅಮೆರಿಕದ ಅಧ್ಯಕ್ಷನಾಗಿದ್ದ ಅಬ್ರಹಾಂ ಲಿಂಕನ್, ದಕ್ಷಿಣದ ದಂಗೆಕೋರ ರಾಜ್ಯಗಳ ಸೈನ್ಯವನ್ನು ಸದೆಬಡಿಯಲು ಜನರಲ್ ಯೂಲಿಸಿಸ್ ಗ್ರಾಂಟ್‌ನನ್ನು 1864ರಲ್ಲಿ 'ಸಂಯುಕ್ತ ಸೇನೆ'ಯ ಮುಖ್ಯಸ್ಥನನ್ನಾಗಿ ನಿಯಮಿಸಿದ. ಆ ಪ್ರಮುಖ ಯುದ್ಧದಲ್ಲಿ ಲಿಂಕನ್ನನಿಗೆ ಅಂತಿಮವಾಗಿ, 1865ರಲ್ಲಿ ಜಯವಾಗುವಂತೆ ಕಾರಣನಾದವನು ಗ್ರಾಂಟ್.

ನಂತರದ ದಿನಗಳಲ್ಲಿ ಗ್ರಾಂಟ್ ಸಹ ಅಮೆರಿಕದ ಅಧ್ಯಕ್ಷನಾಗಿ ವಾಷಿಂಗ್ಟನ್‌ನ ಶ್ವೇತಭವನಕ್ಕೆ ತೆರಳಿದ. ಅದಕ್ಕೆ ಸುಮಾರು ಒಂದು ದಶಕದ ಮೊದಲು ಅವನು ವಾಸವಾಗಿದ್ದ ಸೇಂಟ್ ಲೂಯಿಸ್‌ನ ಅವನ ಮನೆಯಿದ್ದ ಪ್ರದೇಶವಾದ 'ವೈಟ್ ಹೆವನ್' ಅನ್ನು ಒಂದು ಅಂದವಾದ